ಗದ್ದಿಗೌಡರು ಹಾಗೂ ಹುಂಡೇಕಾರರ ತಾಲ್ಲೂಕು ಪುನರ್ವಿಂಗಡಣಾ ಸಮಿತಿಗಳು.

149(195) ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳ್ಳೇದಗುಡ್ಡ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದ್ದಿಗೌಡ್ರ ಹಾಗೂ ಹುಂಡೇಕಾರರ ತಾಲ್ಲೂಕು ಪುನರ್ವಿಂಗಡನಾ ಸಮಿತಿಗಳ ಶಿಫಾರಸ್ಸಿನಂತೆ ಗುಳೇದಕುಡ್ಡವನ್ನು ತಾಲ್ಲೂಕು ಕೇಂದ್ರವಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಜಿಲ್ಲಾ ಪುನರ್ವಿಂಗಡನೆ ಮಾಡಿದಾಗ ನಂತರದಲ್ಲಿ ತಾಲ್ಲೂಕು ಪುನರ್ವಿಂಗಡನೆ ಮಾಡಲಾಗುವುದೆಂಬ ಹೇಳಿಕೆಯಂತೆ ಸರ್ಕಾರವು ಪ್ರಕ್ರಿಯೆ ಏನಾದರೂ ಪ್ರಾರಂಭ ಮಾಡಿದೆಯೇ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ರಾಜ್ಯದಲ್ಲಿ ಸದ್ಯಕ್ಕೆ ಯಾವುದೇ ತಾಲ್ಲೂಕುಗಳನ್ನು ರಚಿಸುವ ವಿಚಾರ ಸರ್ಕಾರದಲ್ಲಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಗುಳೇದಗುಡ್ಡ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡಗಳು.

150(357) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದ್‌ಗುಡ್ಡ) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆಗಳ ಅಡಿಯಲ್ಲಿ ನಿರ್ಮಾಣಗೊಂಡ ಅಂಗನವಾಡಿ ಕಟ್ಟಡಗಳ ಸಂಖ್ಯೆ ಎಷ್ಟು ;

ಆ) ಅವುಗಳಿಗೆ ಒದಗಿಸಲಾದ ಅನುದಾನ ಎಷ್ಟು ;

ಇ) ಅಂಗನವಾಡಿ ಕಟ್ಟಡಗಳಲ್ಲಿ ಪೂರ್ಣಗೊಂಡ ಪ್ರಗತಿಯಲ್ಲಿರುವ ಕೆಲಸ ಪ್ರಾರಂಭವಾಗದೇ ಇರುವ ಕಟ್ಟಡಗಳ ಸಂಖ್ಯೆ ಎಷ್ಟು?